ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ:11:2022-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:-19.01.2023

ಇವರಿಗೆ

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ
ಜಂಟಿ ನಿರ್ದೇಶಕರುಗಳು /
ಸರ್ಕಾರಿ ಪ್ರಥಮ ದರ್ಜೆ ಪ್ರಾಂಶುಪಾಲರುಗಳು

ವಿಷಯ:- ಸರ್ಕಾರದ ಆದೇಶಗಳನ್ನು ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳಿಗೆ ಪರಿಚಲಿಸುವ ಬಗ್ಗೆ.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ: ಆಇ 02 ಬಿಪಿಇ 2023 ಬೆಂಗಳೂರು, ದಿನಾಂಕ:10.01.2023

*******

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಕ್ರಮವಾಗಿ ಸರ್ಕಾರದ ಆದೇಶದಲ್ಲಿ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ಕಾಲಮಿತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಪ್ರಯುಕ್ತ ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓ (DDO)ಗಳು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗಧಿಪಡಿಸಿರುವ ಕಾಲಮಿತಿಯೊಳಗೆ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಅಡಕ: ಉಲ್ಲೇಖಿತ ಸರ್ಕಾರದ ಆದೇಶ

ಪ್ರತಿಯನ್ನು:
1. ಲೆಕ್ಕಾಧಿಕಾರಿಗಳು, ಹಣಪಾವತಿ ವಿಭಾಗ, ಕಾಶಿಇ, ಕೇಂದ್ರಕಛೇರಿ ಬೆಂಗಳೂರು- ಅಗತ್ಯ ಕ್ರಮಕ್ಕಾಗಿ
2. ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು , ಮಾಹಿತಿ & ತಂತ್ರಜ್ಞಾನ ವಿಭಾಗ , ಕಾಶಿಇ, ಕೇಂದ್ರಕಛೇರಿ ಬೆಂಗಳೂರು- ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ

16 JAN 2023

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 30 ಬಿಪಿಇ 2021, ದಿನಾಂಕ:28.12.2021.

2. ಆಯುಕ್ತರು, ಖಜಾನೆ ಇಲಾಖೆ ಇವರ e-office ಕಡತ ಸಂಖ್ಯೆ: DOT/PRO /CLAR/23/2022-PRO-DIRECTORATE OF TREASURIES (#956375).

* * * * *

ಪ್ರಸ್ತಾವನೆ:-

2021-22ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ, ತೀರ್ಣಗೊಳಿಸಿ ದಿನಾಂಕ:31.03.2022 ರಂದೇ 2021-22 ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1)ರ ಸರ್ಕಾರಿ ಆದೇಶ ಮತ್ತು ತದನಂತರದ ಆದೇಶಗಳಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

2022-23 ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಸಹ ಖಜಾನೆಗಳಲ್ಲಿ ಸ್ವೀಕರಿಸಿ, ತೀರ್ಣಗೊಳಿಸಿ ದಿನಾಂಕ:31.03.2023 ರಂದೇ 2022-23 ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಸೂಕ್ತ ವೇಳಾಪಟ್ಟಿಯನ್ನು ನೀಡಿ ಸಾಕಷ್ಟು ಮುಂಚಿತವಾಗಿ ಆದೇಶವನ್ನು ಹೊರಡಿಸುವುದು ಅವಶ್ಯವಿದೆಯೆಂದು ಖಜಾನೆ ಆಯುಕ್ತರು ಮೇಲೆ ಉಲ್ಲೇಖ(2)ರಲ್ಲಿ ಓದಲಾದ ಕಡತದಲ್ಲಿ ಸರ್ಕಾರವನ್ನು ಕೋರಿದ್ದಾರೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಇ 02 ಬಿಪಿಇ 2023 ಬೆಂಗಳೂರು, ದಿನಾಂಕ: 10.01.2023**

ಎ) ಆಡಳಿತ ಇಲಾಖೆಗಳ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ನಿಗದಿಗೊಳಿಸಿರುವ ಕಾಲಮಿತಿ.

| ಕ್ರಮ ಸಂ | ಬಿಲ್ಲುಗಳ ಸ್ವರೂಪ /ವಿವರಗಳು | 31.12.2022 ರವರೆಗೆ ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ | 31.12.2022 ರ ನಂತರ ಆಗಿರುವ ವೆಚ್ಚಗಳಿಗೆ ಸಂಬಂಧಿಸಿದಂತೆ ಬಿಲ್ಲು ಸಲ್ಲಿಸುವ ಕಡೆಯ ದಿನಾಂಕ |
|---|---|---|---|
| 01 | ವೇತನ/ವೇತನ ಬಾಕಿ ಬಿಲ್ಲುಗಳು/ಹಬ್ಬದ ಮುಂಗಡ ಬಿಲ್ಲು/ಅನುದಾನಿತ ವೇತನ ಬಿಲ್ಲು/ಇತರೆ ಅನುದಾನಿತ ಬಿಲ್ಲುಗಳು | 10.02.2023 | 10.03.2023 |
| 02 | ಕಛೇರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಸಾದಿಲ್ವಾರು ಬಿಲ್ಲುಗಳು/ಪ್ರಯಾಣ ಭತ್ಯೆ ಬಿಲ್ಲುಗಳು | 15.02.2023 | 10.03.2023 |
| 03 | EAP ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅನುದಾನ ಬಿಡುಗಡೆಯ ಬಿಲ್ಲುಗಳು | 15.02.2023 | 10.03.2023 |
| 04 | ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಹಾಗೂ EAP ,ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ಯೋಜನೆ ಬಿಲ್ಲುಗಳು | – | 20.03.2023 |

| | | | |
|---|---|---|---|
| 05 | ವಿದ್ಯುಚ್ಛಕ್ತಿ ,ದೂರವಾಣಿ ಹಾಗೂ ಕಟ್ಟಡ ಬಾಡಿಗೆಗೆ ಸಂಬಂಧಿಸಿದ ಬಿಲ್ಲುಗಳು | 16.02.2023 | 10.03.2023 |
| 06 | ಏಪ್ರಿಲ್ ತಿಂಗಳಲ್ಲಿ ಪಾವತಿಯಾಗುವ ಮಾರ್ಚ್ ತಿಂಗಳ ವೇತನ /ವೇತನ ಅನುದಾನಿತ ಬಿಲ್ಲುಗಳು | 02–04–2023 ರ ನಂತರ | |
| 07 | ಇಲಾಖೆಗಳು ಹಾಗೂ ಸಚಿವಾಲಯದ ಆಡಳಿತ ಇಲಾಖೆಗಳು ಹೊರಡಿಸುವ ಮರುವಿನಿಯೋಗದ ಬಿಲ್ಲುಗಳು | 20.03.2023 | |
| 08 | ಪೂರಕ ಅಂದಾಜು –3 ರಲ್ಲಿ ಸಕ್ರಮಗೊಳಿಸುವ ಹೆಚ್ಚುವರಿ ಆದೇಶದ ಬಿಲ್ಲುಗಳು | ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಆದೇಶಗಳ ಅನುಸಾರ | |
| 09 | ಪೂರಕ ಅಂದಾಜು –3 ರಲ್ಲಿ ಒದಗಿಸಿರುವ ಅನುದಾನದ ಬಿಲ್ಲುಗಳು | ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಆದೇಶಗಳ ಅನುಸಾರ | |
| 10 | ZP/ TP ವೇತನ / ವೇತನೇತರ ಮತ್ತು ಅನುದಾನಿತ (GIA) ಬಿಲ್ಲುಗಳು (EAP ಕೇಂದ್ರ ಪುರಸ್ಕೃತ ಹಾಗು ಕೇಂದ್ರ ಯೋಜನೆಗಳನ್ನು ಹೊರತುಪಡಿಸಿ) | 10.3.2023 | |
| 11 | ಆರ್ಥಿಕ ಇಲಾಖೆಯಿಂದ ದಿ:31.01.2023 ಕ್ಕಿಂತ ಮೊದಲು ಹೊರಡಿಸಲಾಗುವ ಮರುವಿನಿಯೋಗದ ಮತ್ತು ಹೆಚ್ಚುವರಿ ಅನುದಾನದ ಬಿಲ್ಲುಗಳು | 16.02.2023 | |
| 12 | ಆರ್ಥಿಕ ಇಲಾಖೆಯಿಂದ ದಿ:31.01.2023 ರ ನಂತರ ಹೊರಡಿಸಲಾಗುವ ಮರುವಿನಿಯೋಗದ ಮತ್ತು ಹೆಚ್ಚುವರಿ ಅನುದಾನದ ಬಿಲ್ಲುಗಳು | 23.03.2023 | |

ಬಿ) ಆಡಳಿತ ಇಲಾಖೆಗಳಿಗೆ ಸೂಚನೆಗಳು:–

1. ದಿನಾಂಕ:31.03.2023 ರಂದು ಕಛೇರಿ ವ್ಯವಹಾರ ಅವಧಿ ಮುಗಿದ ನಂತರ ಯಾವುದೇ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ.

2. ಇಲಾಖಾ ಮುಖ್ಯಸ್ಥರು ಮತ್ತು ಅವರುಗಳ ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಈ ಆದೇಶದಲ್ಲಿ ತಿಳಿಸಿರುವ ವೇಳಾ ಪಟ್ಟಿಯಂತೆ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಸರ್ಕಾರದ ಆದೇಶ ಸಂಖ್ಯೆ: ಆಇ 2 ಟಿಎಫ್‌ಸಿ 2004, ದಿನಾಂಕ:09–09–2004ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮೇಲೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವನ್ನು ದಿನಾಂಕ:31.03.2023 ರೊಳಗೆ ವೆಚ್ಚ ಮಾಡತಕ್ಕದ್ದು.

4. ಕಾಲಮಿತಿಯೊಳಗೆ ಪರಿಪೂರ್ಣವಾಗಿರುವ ಬಿಲ್ಲುಗಳನ್ನು ಸಲ್ಲಿಸಲು, ಇಲಾಖೆಗಳು ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದು. ಡಿ.ಎಸ್.ಸಿ ಸಂಗ್ರಹಣೆ / ನವೀಕರಣ ಅನುದಾನ ಕೋರಿಕೆ, ಮ್ಯಾಪಿಂಗ್ ಮುಂತಾದ ಚಟುವಟಿಗಳನ್ನು ಮುಂಚಿತವಾಗಿ ಪರಿಶೀಲಿಸಿ ಯಾವುದೇ ತೊಂದರೆ / ವಿಳಂಬವಾಗದಂತೆ ಎಚ್ಚರಿಕೆ ವಹಿಸುವುದು.

5. ಬಿಲ್ಲುಗಳನ್ನು ಸೆಳೆದು ಬ್ಯಾಂಕ್ ಅಥವಾ ವ್ಯೆಯುಕ್ತಿಕ ಠೇವಣಿ ಖಾತೆಗಳಲ್ಲಿ ಮೊತ್ತವನ್ನು ಜಮೆ ಮಾಡಲು ಆರ್ಥಿಕ ಇಲಾಖೆಯ ಲಿಖಿತ ಅನುಮತಿ ಅಗತ್ಯವಿರುತ್ತದೆ.

ಸಿ) ಖಜಾನೆಗಳಿಗೆ ಸೂಚನೆಗಳು:-

1. ಎಲ್ಲಾ ಖಜಾನೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸಲು ಅನುಕೂಲವಾಗುವಂತೆ ದಿನಾಂಕ:01-04-2023 ನ್ನು ವ್ಯವಹಾರ ರಹಿತ ದಿನವನ್ನಾಗಿ ಘೋಷಿಸಲಾಗಿದೆ.

2. ಖಜಾನೆಗಳು ಮಾರ್ಚ್ 2023 ರ ಲೆಕ್ಕಗಳನ್ನು 31ನೇ ಮಾರ್ಚ್ 2023 ರ ನಂತರವೂ ತೆರೆದಿರಕೂಡದೆಂದು ಸೂಚಿಸಲಾಗಿದೆ.

3. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) ರವರು 2022-23 ರ ತಾತ್ಕಾಲಿಕ ಲೆಕ್ಕಗಳನ್ನು 10ನೇ ಮೇ 2023ರೊಳಗಾಗಿ ಸರ್ಕಾರಕ್ಕೆ ಕಳುಹಿಸಲು ಅನುವಾಗುವಂತೆ ಖಜಾನಾಧಿಕಾರಿಗಳು ನಿಗದಿತ ಸಮಯದೊಳಗೆ ಮಹಾಲೇಖಪಾಲರಿಗೆ ಮಾರ್ಚ್ 2023ರ ಲೆಕ್ಕಗಳನ್ನು ಸಲ್ಲಿಸತಕ್ಕದ್ದು.

4. ಖಜಾನೆಗಳು ಸಲ್ಲಿಸಲಾಗಿರುವ ಎಲ್ಲಾ ಕ್ರಮಬದ್ಧ ಬಿಲ್ಲುಗಳು ವ್ಯಪಗತವಾಗದಂತೆ, ಅಗತ್ಯವಿದ್ದಲ್ಲಿ ಹೆಚ್ಚುವರಿ ವೇಳೆ ಕೆಲಸ ನಿರ್ವಹಿಸಿ ನಿಯಮಾನುಸಾರ ವಿಲೇ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.karnataka.gov.in ನಿಂದ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಿರೀಶ್.ಕೆ)
ಸರ್ಕಾರದ ಉಪ ಕಾರ್ಯದರ್ಶಿ (ಆ & ಸಂ)
ಆರ್ಥಿಕ ಇಲಾಖೆ

<u>ಇವರಿಗೆ:-</u>

1) ಪ್ರಧಾನ ಮಹಾಲೇಖಪಾಲರು (A&E)/(Audit-I)/( Audit-II), ಕರ್ನಾಟಕ, ಬೆಂಗಳೂರು.
2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.
5) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

10)ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು /ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಯೋಜನಾ ನಿರ್ದೇಶಕರು, HRMS-2.

13) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

14) ಎಲ್ಲಾ ಇಲಾಖಾ ಮುಖ್ಯಸ್ಥರು.

15) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.